# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ

ದಿನಾಂಕ:17/08/2016

ಪ್ರಕರಣ ಸಂಖ್ಯೆ: ಆರ್‌ಎ 52/2014-15

ಉಪಸ್ಥಿತರು:ಶ್ರೀ.ಡಾ॥ ಕೆ.ವಿ.ತ್ರಿಲೋಕ್ ಚಂದ್ರ ಭಾ.ಆ.ಸೇ.,
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

| ಮೇಲ್ಮನವಿದಾರರು | ವಿರುದ್ಧ | ಎದುರುದಾರರು |
| --- | --- | --- |
| 1.ಉತ್ತನಲ್ಲಪ್ಪ<br>ಬಿನ್ ಮುನಿಶಾಮಪ್ಪ<br>ಕೆಂದಟ್ಟಿ ಗ್ರಾಮ<br>ವಕ್ಕಲೇರಿ ಹೋಬಳಿ<br>ಕೋಲಾರ ತಾಲ್ಲೂಕು<br>(ಶ್ರೀ ಹೆಚ್. ಸುಬ್ರಮಣಿ<br>- ವಕೀಲರು, ರವರಿಂದ ) | | 1. ಸಹಾಯಕ ಕಮೀಷನರ್<br>ಕೋಲಾರ ಉಪವಿಭಾಗ<br>2. ಪಾರ್ವತಮ್ಮ<br>ಕೋಂ ಮುನಿಯಳಚಪ್ಪ<br>ಕೆಂದಟ್ಟಿ ಗ್ರಾಮ<br>ವಕ್ಕಲೇರಿ ಹೋಬಳಿ<br>ಕೋಲಾರ ತಾಲ್ಲೂಕು<br>3. ಬಿ.ವಿ. ನಾರಾಯಣಸ್ವಾಮಿ<br>ಬಿನ್ ವೆಂಕಟರವಣಪ್ಪ<br>4. ಬಿ.ವಿ. ನಾಗರಾಜು<br>ಬಿನ್ ವೆಂಕಟರವಣಪ್ಪ<br>5. ಸಹನ<br>ಕೋಂ ಬಿ.ವಿ. ರಾಮಸ್ವಾಮಿ<br>-ಕ್ರಸಂ 3 ರಿಂದ 5 ಎಲ್ಲರೂ ವಾಸ<br>ಬುಸ್ಸನಹಳ್ಳಿ ಗ್ರಾಮ<br>ಸುಗಟೂರು ಹೋಬಳಿ<br>ಕೋಲಾರ ತಾಲ್ಲೂಕು<br>(ಶ್ರೀ ಎಸ್.ಎಂ. ವೆಂಕಟೇಶಪ್ಪ<br>- ವಕೀಲರು, ರವರಿಂದ ) |

ವಿಷಯ:ಸಹಾಯಕ ಕಮೀಷನರ್, ಕೋಲಾರ ಉಪ ವಿಭಾಗ ರವರ ನಂ. ಆರ್‌ಎ413/2013-14 ದಿನಾಂಕ:16/09/2014. ರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ

0-0-0

ಪ್ರಸ್ತಾವನೆ.

ಈ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 50 ರಂತೆ ಸಲ್ಲಿಸಿರುತ್ತಾರೆ.

ಪ್ರಕರಣದ ಸಂಕ್ಷಿಪ್ತ ವಿವರ,

ಕೋಲಾರ ತಾಲ್ಲೂಕು ವಕ್ಕಲೇರಿ ಹೋಬಳಿ ಕೆಂದಟ್ಟಿ ಗ್ರಾಮದ ಶ್ರೀಮತಿ ಪಾರ್ವತಮ್ಮ ಬಿನ್ ಮುನಿಯಳಚಪ್ಪ ರವರು ತಹಶೀಲ್ದಾರ್, ಕೋಲಾರ ತಾಲ್ಲೂಕು ರವರಿಗೆ ಮೇಲ್ಮನವಿ ಅರ್ಜಿ ಸಲ್ಲಿಸಿ ಸದರಿ ಕೆಂದಟ್ಟಿ ಗ್ರಾಮದ. ಸ.ನಂ 140/4 ರಲ್ಲಿನ 0.04 ಗುಂಟೆ ಜಮೀನಿನ ಖಾತೆ ಮುನಿಯಳಚಪ್ಪ

...2

ರವರ ಹೆಸರಿನಲ್ಲಿದ್ದು ಅವರು ಫವತಿ ಆಗಿರುವುದರಿಂದ ಸದರಿ ಜಮೀನಿನ ಖಾತೆಯನ್ನು ತನ್ನ ಹೆಸರಿಗೆ ಫವತಿ ವಾರಸು ಮೇರೆಗೆ ಬದಲಾವಣೆ ಮಾಡಲು ಕೋರಿರುತ್ತಾರೆ. ಅದರಂತೆ ನಮೂನೆ-21 ನ್ನು ಪ್ರಚುರಪಡಿಸಲಾಗಿ ನಿಗಧಿತ ಅವಧಿಯೊಳಗೆ ಉತ್ತನಲ್ಲಪ್ಪ ಬಿನ್ ಮುನಿಶಾಮಪ್ಪ ಎಂಬುವರು ತಕರಾರು ಅರ್ಜಿ ಸಲ್ಲಿಸಿ ಕೆಂದಟ್ಟಿ ಗ್ರಾಮದ ಸ.ನಂ. 140/4 ರಲ್ಲಿನ 0.04 ಗುಂಟೆ ಜಮೀನು ತನ್ನ ಪಿತ್ರಾರ್ಜಿತ ಆಸ್ತಿ ಆಗಿರುವುದರಿಂದ ಸದರಿ ಜಮೀನಿನ ಖಾತೆಯನ್ನು ವಾದಿಯ ಹೆಸರಿಗೆ ಬದಲಾವಣೆ ಮಾಡಬಾರದೆಂದು ತಹಶೀಲ್ದಾರ್ ರವರಲ್ಲಿ ಮನವಿ ಮಾಡಿರುತ್ತಾರೆ. ಉದ್ದೇಶಿತ ಖಾತೆ ಬದಲಾವಣೆಗೆ ತಕರಾರು ಬಂದ ಹಿನ್ನೆಲೆಯಲ್ಲಿ ತಹಶೀಲ್ದಾರ್ ರವರು ವಿವಾದಾಸ್ಪದ ಪ್ರಕರಣವನ್ನಾಗಿ ದಾಖಲಿಸಿಕೊಂಡು ವಿಚಾರಣೆ ಮಾಡಿರುತ್ತಾರೆ. ವಾದಿ ಮತ್ತು ಪ್ರತಿವಾದಿ ಇಬ್ಬರೂ ಮೂಲಖಾತೇದಾರರಿಗೆ ಯಾವ ರೀತಿ ವಾರಸುದಾರರು ಎಂಬುದನ್ನು (Hindu Succession Act) ಅನುಸಾರ ಸಕ್ಷಮ ನ್ಯಾಯಾಲಯದಿಂದ ದೃಢಪಡಿಸಿಕೊಂಡು ನಂತರ ಖಾತೆ ಬದಲಾವಣೆಗೆ ಕೋರಿಕೆ ಸಲ್ಲಿಸಬಹುದೆಂದು ನಿರ್ಣಯಿಸಿ ಪ್ರಕರಣ ಸಂಖ್ಯೆ:ಆರ್‌ಆರ್‌ಟಿ(ಡಿಸ್) 20/2012-13 ರಲ್ಲಿ ದಿನಾಂಕ:24/10/2013 ರಂದು ಹೊರಡಿಸಿದ ಆದೇಶದಲ್ಲಿ ವಾದಿಯ ಅರ್ಜಿಯನ್ನು ವಜಾಕರಿಸಿರುತ್ತಾರೆ. ಈ ಆದೇಶದಿಂದ ಬಾದಿತರಾದ ಶ್ರೀಮತಿ ಪಾರ್ವತಮ್ಮ ಕೋಂ ಯಳಚಪ್ಪ ಅಲಿಯಾಸ್ ಮುನಿಯಳಚಪ್ಪ ರವರು ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರಲ್ಲಿ ಅರ್ಜಿ ಸಲ್ಲಿಸಿದ ಮೇರೆಗೆ ವಿಚಾರಣೆ ನಡೆದಿರುತ್ತೆ. ಪ್ರಕರಣ ಸಂಖ್ಯೆ; ಆರ್‌ಎ 413/2013-14 ರಲ್ಲಿ ದಿನಾಂಕ:16/09/2014 ರಂದು ಹೊರಡಿಸಿದ ಆದೇಶದಲ್ಲಿ ಮೇಲ್ಮನವಿಯನ್ನು ಪುರಸ್ಕರಿಸಿರುತ್ತಾರೆ. ದಾವಾಸ್ವತ್ತಿನ ಖಾತೆಯನ್ನು ಎಂ.ಆರ್. ಹೆಚ್ 16/2013-14 ರಂತೆ ಉತ್ತನಲ್ಲಪ್ಪ ಬಿನ್ ಮುನಿಶಾಮಪ್ಪ ರವರ ಹೆಸರಿಗೆ ದಾಖಲಿಸಿರುವುದನ್ನು ರದ್ದುಪಡಿಸಿರುತ್ತಾರೆ. ಈ ಮ್ಯುಟೇಶನ್ ಆದೇಶಕ್ಕಿಂತಲೂ ಮುಂಚಿನ ಖಾತೇದಾರರ ಹೆಸರನ್ನು ಕಂದಾಯ ದಾಖಲೆಗಳಲ್ಲಿ ನಮೂದಿಸಲು ನಿರ್ದೇಶಿಸಿರುತ್ತಾರೆ. ಈ ಆದೇಶದಿಂದ ಬಾದಿತರಾದ ಮೇಲ್ಮನವಿದಾರರು ಪ್ರಸ್ತುತ ಮೇಲ್ಮನವಿ ಸಲ್ಲಿಸಿರುತ್ತಾರೆ. ಉಭಯತ್ರರಿಗೂ ನೋಟೀಸು ನೀಡಿ ವಿಚಾರಣೆ ಪ್ರಾರಂಭಿಸಲಾಯ್ತು.

ದಿನಾಂಕ:10/12/2014 ರಂದು ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಂಡಾಗ ಉಭಯತ್ರರು ಹಾಜರು. 2ನೇ ಎದುರುದಾರರ ಪರ ವಕೀಲರು ವಕಾಲತ್ ಸಲ್ಲಿಸಿ ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶ ಕೋರಿದರು. ದಿನಾಂಕ:11/02/2015 ರಂದು 3,4 ಮತ್ತು 5ನೇ ಎದುರುದಾರರ ವಕೀಲರು ವಕಾಲತ್ ಸಲ್ಲಿಸದರು. ದಿನಾಂಕ:05/05/2015 ರಂದು ಉಭಯತ್ರರು ಹಾಜರು. ಪ್ರಕರಣವನ್ನು ಆದೇಶಕ್ಕಾಗಿ ಕಾದಿರಿಸಲಾಗಿತ್ತು.

ಮೇಲ್ಮನವಿದಾರರು ತಮ್ಮ ಲಿಖಿತ ವಾದದಲ್ಲಿ ಕೋಲಾರ ತಾಲ್ಲೂಕು, ವಕ್ಕಲೇರಿ ಹೋಬಳಿ, ಕೆಂದಟ್ಟಿ ಗ್ರಾಮದ ಸ.ನಂ. 140/4 ರಲ್ಲಿನ 0-04 ಗುಂಟೆ ಜಮೀನು ಯಳಚಪ್ಪ ರವರಿಗೆ ಸೇರಿದ ಆಸ್ತಿಯಾಗಿರುತ್ತೆ. ಯಳಚಪ್ಪ ಮತ್ತು ಮೇಲ್ಮನವಿದಾರರ ತಂದೆ ಲೇಟ್ ಮುನಿಶಾಮಪ್ಪ ರವರು ಅಣ್ಣ ತಮ್ಮಂದಿರಾಗಿದ್ದು, ಒಟ್ಟು ಕುಟುಂಬದಲ್ಲಿ ವಾಸವಿರುವುದಾಗಿ ನಿವೇದಿಸಿರುತ್ತಾರೆ. ಯಳಚಪ್ಪ ರವರಿಗೆ ಗಂಡು ಸಂತತಿ ಇಲ್ಲದ ಕಾರಣ ಮೇಲ್ಮನವಿದಾರರೇ ಖಾತೇದಾರರ ವಾರಸುದಾರರಾಗಿರುತ್ತಾರೆ. ಯಳಚಪ್ಪನಿಗೆ ಯಳಮ್ಮ ಎಂಬ ಮಗಳಿದ್ದು, ಈಕೆಗೆ ವಿವಾಹವಾಗಿ ಸುಗಟೂರು ಹೋಬಳಿ, ಬುಸ್ಸನಹಳ್ಳಿ ಗ್ರಾಮದಲ್ಲಿ ವಾಸವಿದ್ದು, ಯಳಚಪ್ಪ ನಿಧನದ ನಂತರ ಯಳಚಪ್ಪನ ಆಸ್ತಿಯ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ವಿಚಾರಣೆ ನಂತರ ನಂ.ಓ.ಎಸ್102/2004 ರ ಆದೇಶದ ತೀರ್ಪಿನಲ್ಲಿ ನ್ಯಾಯಾಲಯವು ಯಳಚಪ್ಪನ ಎಲ್ಲಾ ಆಸ್ತಿಗೆ ಯಳಮ್ಮನವರೆ ವಾರಸುದಾರರೆಂದು ನ್ಯಾಯಾಲಯ ತನ್ನ ತಿರ್ಪಿನಲ್ಲಿ ಆದೇಶವಾಗಿರುತ್ತದೆ. ನಂತರ ಯಳಮ್ಮ ನವರ ವಿರುದ್ಧ ಮೇಲ್ಮನವಿದಾರರ ಹೆಂಡತಿ ಮತ್ತು ಮಕ್ಕಳು ತಮ್ಮ ಪಿತ್ರಾರ್ಜಿತ ಆಸ್ತಿಗಳಲ್ಲಿ ಪಾಲು ಕೇಳಿ ದಾವೆ ಹೂಡಿದ್ದು, ಸದರಿ ದಾವೆಯಲ್ಲಿ ಯಳಮ್ಮ ನವರು ರಾಜಿ ಮೂಲಕ ತಮ್ಮ ಪಾಲಿನ ಹಕ್ಕನ್ನು ಮೇಲ್ಮನವಿದಾರರ ಹೆಂಡತಿ ಮತ್ತು ಮಕ್ಕಳಿಗೆ ಬಿಟ್ಟುಕೊಟ್ಟಿರುತ್ತಾರೆ. ಈ ಮೂಲಕ ಯಳಚಪ್ಪ ನವರ ಎಲ್ಲಾ ಆಸ್ತಿಗೂ ಮೇಲ್ಮನವಿದಾರರೆ ಹಕ್ಕುದಾರರೆಂದು ನಿವೇದಿಸಿಕೊಂಡಿರುತ್ತಾರೆ. ಎರಡನೇ ಎದುರುದಾರರ

...3

ಗಂಡನ ಹೆಸರು ಮುನಿಯಳಚಪ್ಪ ಆಗಿದ್ದು, ಇವರ ಕುಟುಂಬಕ್ಕೂ ನಮ್ಮ ಯಾವುದೇ ಸಂಬಂಧವಿರುವುದಿಲ್ಲವೆಂದೂ, ಈಗಾಗಲೇ ಎರಡನೇ ಎದುರುದಾರರು ತಮ್ಮ ಕುಟುಂಬದ ಆಸ್ತಿಯನ್ನು ವಿಭಾಗ ಮಾಡಿಕೊಂಡು ಎಂ.ಆರ್ 4/91-92 ರಂತೆ ಖಾತೆ ಮಾಡಿಕೊಂಡಿರುತ್ತಾರೆ. ಸದರಿ ಮ್ಯುಟೇಶನ್ ಪರಿಶೀಲಿಸಲಾಗಿ 2ನೇ ಎದುರುದಾರರ ಗಂಡನ ಹೆಸರು ಮುನಿಯಳಚಪ್ಪ ಎಂಬುದಾಗಿರುತ್ತದೆ. ಇವರು ಸುಳ್ಳು ವಂಶವೃಕ್ಷವನ್ನು ನೀಡಿ ದಾವಾ ಸ್ವತ್ತನ್ನು ಖಾತೆ ಮಾಡಿಸಿಕೊಳ್ಳಲು ಕೋರಿರುವುದು ಕಾನೂನು ಬಾಹಿರವಾಗಿರುತ್ತೆ. ವಿವಾದಿತ ಜಮೀನಿಗೂ 2ನೇ ಎದುರುದಾರರಿಗೂ ಯಾವುದೇ ಸಂಬಂಧವಿಲ್ಲದಿರುವುದರಿಂದ ಮೇಲ್ಮನವಿ ಅರ್ಜಿಯನ್ನು ಪುರಸ್ಕರಿಸಿ ಮೇಲ್ಮನವಿದಾರರ ಹೆಸರಿಗೆ ಖಾತೆ ಮುಂದುವರೆಸಲು ಕೋರಿರುತ್ತಾರೆ.

ಎರಡನೇ ಎದುರುದಾರರ ತಮ್ಮ ಲಿಖಿತ ವಾದದಲ್ಲಿ ಮೇಲ್ಮನವಿದಾರರಿಗೆ ವಿವಾದಿತ ಜಮೀನಿನ ಬಗ್ಗೆ ಯಾವುದೇ ಹಕ್ಕು ಇರುವುದಿಲ್ಲ, ವಿವಾದಿತ ಕೆಂದಟ್ಟಿ ಗ್ರಾಮದ ಸ.ನಂ. 140/4 ರ 0-04 ಗುಂಟೆ ಜಮೀನು ಮೂಲತಃ ಎರಡನೇ ಎದುರುದಾರರ ಗಂಡ ಮುನಿಯಳಚಪ್ಪ (ಅ) ಯಳಚಪ್ಪ ರವರಿಗೆ ಸೇರಿದ ಆಸ್ತಿಯಾಗಿದ್ದು, ಮುನಿಯಳಪ್ಪ (ಅ) ಯಳಚಪ್ಪ ರವರ ಫವತಿ ನಂತರ ಈ ಜಮೀನಿಗೆ ಎರಡನೇ ಎದುರುದಾರರೇ ಹಕ್ಕುದಾರರಾಗಿದ್ದು, ಸ್ವಾಧೀನಾನುಭವದಲ್ಲಿರುತ್ತಾರೆ. ಮೇಲ್ಮನವಿದಾರರಿಗಾಗಲೀ ಮೂರರಿಂದ ಐದನೇ ಎದುರುದಾರರಿಗಾಗಲೀ ಯಾವ ಸಂಬಂಧವಿರುವುದಿಲ್ಲವೆಂದು ವಾದಿಸಿ ಮೇಲ್ಮನವಿದಾರರ ಅರ್ಜಿಯನ್ನು ವಜಾಕರಿಸುವಂತೆ ಕೋರಿರುತ್ತಾರೆ.

ದಿನಾಂಕ:04/09/2015 ರಂದು ಮೇಲ್ಮನವಿದಾರರ ವಕೀಲರು ಜ್ಞಾಪನ ಸಲ್ಲಿಸಿ, ದಾವಾಸ್ವತ್ತಿನ ಬಗ್ಗೆ 1ನೇ ಅಪರ ಸಿವಿಲ್ ನ್ಯಾಯಾಧೀಶರು, ಕೋಲಾರ ಇವರ ಘನನ್ಯಾಯಾಲಯವು ಮೂಲದಾವೆ ಓ.ಎಸ್ 784/2014 ರಲ್ಲಿ ದಿನಾಂಕ:28/07/2015 ರಂದು ಹೊರಡಿಸಿರುವ ಆದೇಶದಲ್ಲಿ ರಾಜಿಯಾಗಿದ್ದು, ತಮ್ಮ ಪರವಾಗಿ ಡಿಕ್ರಿ ಆದೇಶವಾಗಿರುವುದಾಗಿ ತಿಳಿಸಿ, ಸದರಿ ಡಿಕ್ರಿ ಆದೇಶದಂತೆ ಆದೇಶ ಮಾಡುವಂತೆ ಕೋರಿರುತ್ತಾರೆ.

ಸಿವಿಲ್ ನ್ಯಾಯಾಲಯದ ಓ.ಎಸ್ 784/2014 ದಿನಾಂಕ:28/07/2015 ರ ಆದೇಶವನ್ನು ಪರಿಶೀಲಿಸಲಾಗಿ, ಸದರಿ ಆದೇಶದಲ್ಲಿ ಕೆಂದಟ್ಟಿ ಗ್ರಾಮದ ಸ.ನಂ 140/4 ರಲ್ಲಿನ 0-04 ಗುಂಟೆ ಜಮೀನು ಉತ್ತನಲ್ಲಪ್ಪ ಬಿನ್ ಮುನಿಶಾಮಪ್ಪ ರವರ ಹೆಸರಿಗೆ ಡಿಕ್ರಿ ಆಗಿರುತ್ತೆ. ಸಿವಿಲ್ ನ್ಯಾಯಾಲಯದ ಆದೇಶವನನ್ನುಸರಿಸಿ ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ಮೇಲ್ಮನವಿ ಅರ್ಜಿಯನ್ನು ಭಾಗಶಃ ಪುರಸ್ಕರಿಸಿದೆ. ಗೌರವಾನ್ವಿತ ಸಿವಿಲ್ ನ್ಯಾಯಾಲಯವು ಮೂಲದಾವೆ ಓ.ಎಸ್ 784/2014 ರಲ್ಲಿ ದಿನಾಂಕ:28/07/2015 ರಂದು ಹೊರಡಿಸಿರುವ ರಾಜಿ ಡಿಕ್ರಿಯಂತೆ ಕೆಂದಟ್ಟಿ ಗ್ರಾಮದ ಸ.ನಂ. 140/4 ರಲ್ಲಿನ 0.04 ಗುಂಟೆ ಜಮೀನು ಶ್ರೀ ಉತ್ತನಲ್ಲಪ್ಪ ಬಿನ್ ಮುನಿಶಾಮಪ್ಪ ರವರ ಹೆಸರಿಗೆ ಖಾತೆ ಬದಲಾವಣೆ ಮಾಡಲು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 128 ಮತ್ತು 129 ರಂತೆ ಕ್ರಮಜರುಗಿಸಲು ತಹಶೀಲ್ದಾರ್, ಕೋಲಾರ ತಾಲ್ಲೂಕು ರವರಿಗೆ ನಿರ್ದೇಶಿಸಿ ಆದೇಶಿಸಿದೆ.

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಖ್ತಲೇಖನ ನೀಡಿ, ಬೆರಳಚ್ಚು ಮಾಡಿಸಿ ಪರಿಷ್ಕರಿಸಿದೆ. ನಂತರ ದಿನಾಂಕ:17/08/2016 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

C. V. [signature]
ಜಿಲ್ಲಾಧಿಕಾರಿಗಳು
ಕೋಲಾರ ಜಿಲ್ಲೆ

ನಿಜ ಪ್ರತಿ.
ಜಿಲ್ಲಾಧಿಕಾರಿಗಳ ಸರನಾ
ಕೋಲಾರ ಜಿಲ್ಲೆ.
1/9/16